1) ಉಳ್ಳುದೊಂದು ತನು, ಉಳ್ಳುದೊಂದು ಮನ ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯ.
ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯ.
ಅಕಟಕಟಾ ಕೆಟ್ಟೆ ಕೆಟ್ಟೆ ?ಸಂಸಾರಕ್ಕಲ್ಲಾ ಪರಮಾರ್ಥಕ್ಕಲ್ಲಾ ಎರಡಕ್ಕೆ ಬಿಟ್ಟ ಕರುವಿನಂತೆ?
ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಬಹುದೆ ಚೆನ್ನಮಲ್ಲಿಕಾರ್ಜುನಾ?

ಪದಗಳ ಅರ್ಥ

. ಉಳ್ಳುದು-ಇರುವುದು.
ಆಕಟಕಟಾ- ಆಯ್ಯೋ‌ಎನ್ನುವ ಆರ್ತಮೊರೆ.
ಎರಡಕ್ಕೆ ಬಿಟ್ಟ ಕರು-ಒಂದೇಸಲಕ್ಕೆ ಎರಡು ಹಸುಗಳಲ್ಲಿ ಹಾಲುಕುಡಿ ಎಂದು ಬಿಟ್ಟ ಕರುವಿನ ಪರಿ
ಲೌಕಿಕ,ಅಲೌಕಿಕ ಎರಡನ್ನೂ ಒಟ್ಟಿಗೆ ಅನುಭವಿಸು ಎಂದು. ಬಿಲ್ವ-ಬಿಲ್ವಪತ್ರೆ ಕಾಯಿ
ಬೇಲದಕಾಯಿ-ಬೇಲದಹಣ್ಣು, ಪಾನಕಕ್ಕೆ ಮತ್ತು ತಿನ್ನಲು ಬರುತ್ತದೆ. ಲೌಕಿಕದ ಸಂಕೇತ.
ಬಹುದೇ-ಬರುವುದೆ?

ವಚನದ ಅರ್ಥ

ಇಬ್ಬಂದಿ ಒತ್ತಡಕ್ಕೆ ಸಿಕ್ಕಿದ ಸಂದರ್ಭದ ವಚನ ಇದು. ಲಗ್ನವನ್ನೂ ಮಾಡಿಕೊ ಅನುಭಾವ ಜೀವನವನ್ನೂ ಮಾಡು ಎಂದು ಒತ್ತಾಯ ಮಾಡುತ್ತಿರುವ ಸಂದರ್ಭದ ವಚನ ಇದ್ದು.
ಅಕ್ಕಮಹಾದೇವಿಯವರ ಪ್ರಕಾರ ಸಂಸಾರ, ಅನುಭಾವ ಎರಡನ್ನು ಒಟ್ಟಿಗೆ ನಡೆಸಲು ಅವರಿಗೆ ಅಗುವುದಿಲ್ಲ. ಅವರಿಗೆ ಸಂಸಾರ ಇಷ್ಟವೂ ಇಲ್ಲ.ಸಂಸಾರದಲ್ಲಿ 'ಅನುಭಾವಕ್ಕೆ ಸಮಯವೂ ಇಲ್ಲ. ಮತ್ತು ಸಂಸಾರ ಮುಳುಗಿಸುತ್ತದೆ. ಉಳ್ಳುದೊಂದು ತನು, ಉಳ್ಳುದೊಂದು ಮನ.ನನಗೆ ಒಂದೇ ದೇಹವಿದೆ. ಒಂದೇ. ಮನದಲ್ಲಿ ಹೇಗೆತಾನೆ ಎರಡು ವಿಷಯ ಧ್ಯಾನ ಮಾಡಲಿ?ಯಾವ ಮನಸ್ಸಿನಲ್ಲಿ ಸಂಸಾರ ಮಾಡಲಿ ಯಾವ ಮನಸ್ಸಿನಲ್ಲಿ ಅನುಭಾವ ಮಾಡಲಿ? ಅಯ್ಯೋ ಶಿವನೇ ಕೆಟ್ಟ ಕೆಟ್ಟೆ ಸಂಸಾರವೂ ಇಲ್ಲ ಪರಮಾರ್ಥವೂ ಇಲ್ಲ. ಇದೇನು ನನ್ನ ಜೀವನ. ಅರಮನೆಯಲ್ಲಿ ಅಕ್ಕನವರು ಒತ್ತಾಯದ ಬಂಧನದಲ್ಲಿದ್ದರು ಎಂಬುದನ್ನು

ಈವಚನ ಧ್ವನಿಸುತ್ತದೆ. ಎರಡಕ್ಕೆ ಬಿಟ್ಟ ಕರುವಿನಂತೆ. ಎನ್ನುವ ರೂಪಕ ಅವರ ಮೇಲೆ ಇರುವಇಬ್ಬಂದಿ ಒತ್ತಡವನ್ನು ಹೇಳುತ್ತದೆ. ಆಯ್ಕೆ ಕರುವಿಗೆ ಬಿಟ್ಟದ್ದು. ಯಾವ ಹಸು ವಿನಲ್ಲಾದರೂ ಕುಡಿಯಬಹುದು. ಅಕ್ಕಮಹಾದೇವಿಯವರ ಆಯ್ಕೆ ಅನುಭಾವ ಜೀವನ ಪರಮಾತ್ಮ ಎನ್ನುವ ತಾಯ ಅನುಗ್ರಹದ ಹಾಲು ಮಾತ್ರ ಬೇಕು.ವಚನದ ಮುಂದಿನ ಸಾಲಿನ ರೂಪಕ ಇನ್ನೂ ಅಮೋಘವಾಗಿದೆ. ಬಿಲ್ವ ಬೆಳವಲಕಾಯ ಒಂದಾಗಿ ಹಿಡಿಯಬಹುದೆ? ಬಿಲ್ವಪತ್ರೆ ಕಾಯಿ, ಬೇಲದ ಕಾಯಿ ನೋಡಲು ಒಂದೇ ರೀತಿ ಕಾಣುತ್ತವೆ. ಇದು ಬಹಿರಂಗದ ತೋರಿಕೆ ಅಷ್ಟೆ. ಹೊರಗೆ ಗಾತ್ರದಲ್ಲಿ ಬಣ್ಣದಲ್ಲಿ ಅವು ಒಂದೇ ತೆರನಾಗಿವೆ. ಒಳಗೆ ಹೂರಣದಲ್ಲಿ ಬಿಲ್ವಪತ್ರೆ ಕಾಯಿ ಔಷಧಿಗೆ ಮತ್ತು ಪೂಜೆಗೆ ಪತ್ರೆ ಕೊಡುತ್ತದೆ. ಬೆಳವಲಕಾಯಿಯು ಪಾನಕಕ್ಕೆ ಮತ್ತು ಬೆಲ್ಲ ಹಾಕಿ ತಿನ್ನಲಿಕ್ಕೆ ಬರುತ್ತದೆ. ಲೌಕಿಕ್ಕೆ ಬೆಳವಲ. ಅಲೌಕಿಕ್ಕೆ ಬಿಲ್ವಪತ್ರೆಕಾಯಿ.ಅಕ್ಕನವರು ನೋಡಲು ಹೆಣ್ಣು ರೂಪು.ಅವರೊಳಗಿನ ಅಂತಸ್ಸತ್ವ ಮಾತ್ರ ಬೇರೆ. ಅವರುಲೌಕಿಕಕ್ಕೆ ಬರುವವರಲ್ಲ. ಇಂತಹ ದೃಷ್ಟಾಂತ ದಿಂದ ಅಕ್ಕನವರ ಎತ್ತರ ತಿಳಿಯುತ್ತದೆ. ಭೋಗದ ಆಯ್ಕೆ ಕಣ್ಣ ಮುಂದೆ ಇದ್ದರೂ ಅದನ್ನು ಒಲ್ಲೆ ಎಂದು ಆಲೌಕಿಕವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ.ಇಂತಹ ದಟ್ಟ ಜೀವನಾನುಭವದ ಅಭಿವ್ಯಕ್ತಿಯೇ ಅವರನ್ನು ಶ್ರೇಷ್ಠ ಕವಿಯಿತ್ರಿಯನ್ನಾಗಿಸಿದೆ.

2)ಊರ ನಡುವೆ ಒಂದು ಬೇಂಟೆ ಬಿದ್ದಿತ್ತು.
ಆರು ಕಂಡವರು ತೋರಿರಯ್ಯ.
ಊರಿಗೆ ದೂರುವೆನು ಅಗುಸೆಯನಿಕ್ಕುವೆ. ಅರಸುವೆನನ್ನ ಬೇಂಟೆಯ.
ಅರಿತು ಮರೆಯದೆ ಒಂದು ಬೇಂಟೆಯನಾಡಿದೆದೆನು. ಅರಸಿ ಕೊಡಾಚೆನ್ನಮಲ್ಲಿಕಾರ್ಜುನ.

ಪದಗಳ ಅರ್ಥ
ಬೇಂಟೆ-ಶಿಕಾರಿ, ಇಲ್ಲಿ ಬೇಟೆಗೊಳಗಾಗುವ ಪ್ರಾಣಿ ಎಂದರ್ಥ.
ಅಗುಸೆ- ಊರ ಹೆಬ್ಬಾಗಿಲು.
ಇಕ್ಕುವೆ-ಅಗುಳಿ ಹಾಕುವೆ,ಮುಚ್ಚುವೆ.
ಬೇಂಟೆ-ಶಿಕಾರಿ ಮಾಡಿದೆ. ಅರಸಿಕೊಡಾ-ಹುಡುಕಿಕೊಡು.

ಪದಗಳ ಅರ್ಥ

ಊರ ನಡುವೆ ಒಂದು ಬೇಂಟೆ ಬಿದ್ದಿತ್ತು. ಊರು ಎಂದರೆ ಇಲ್ಲಿ ದೇಹ. ಬೇಂಟೆ ಎಂದರೆ ಪ್ರಾಣಿಗಳು. ಇಲ್ಲಿ ಬೇಟೆಯಾಗಲಿರುವ ಪ್ರಾಣಿಗಳು ರಾಗೇಂದ್ರಿಯಗಳು. ಐದು ಇಂದ್ರಿಯ, ನಾಲ್ಕು ಅಂತಃಕರಣಗಳು. ಆರು ಕಂಡವರು ತೋರಿರಯ್ಯ. ಇದನ್ನು ನೋಡಿದವರು ನನಗೆ ತೋರಿಸಿರಿ. ನಾನು ಬೇಂಟೆಯಾಡಲು ಹೊರಟಿದ್ದೇನೆ. ಆ ಪ್ರಾಣಿಗಳು ಎತ್ತಹೋದವೊ ? ನೋಡಿದವರು ಸುದ್ದಿಕೊಡಿರಿ. ಊರಿಗೆ ದೂರುವೆನು ಅಗುಸೆಯನಿಕ್ಕುವೆ. ಊರಿಗೆಲ್ಲ ಹೇಳುತ್ತಿದ್ದೇನೆ. ಊರಿನ ಹೆಬ್ಬಾಗಿಲು ಮುಚ್ಚುತ್ತಿದ್ದೇನೆ. ಹೊರಗೆ ಯಾರು ಬರಬೇಡಿರಿ. ದುಷ್ಟಮೃಗಗಳಿವೆ .ನೀವು ಒಳಗೆ ಬಚ್ಚಿಟ್ಟುಕೊಳ್ಳಿರಿ.ಅರಸುವನನ್ನ ಬೇಂಟೆಯ, ಅರಿತು ಮರೆಯದೆ ಒಂದು ಬೇಂಟೆ ಯನಾಡಿದೆ. ಬೇಟೆ ಹುಡುಕುತ್ತಿದ್ದೇನೆ. ತಿಳಿದು ಬೇಟೆಯನಾಡಿದೆ. ಅರಸಿಕೊಡಾಚೆನ್ನ ಮಲ್ಲಿಕಾರ್ಜುನಾ. ತುಂಬ ಎಚ್ಚರಿಕೆಯಿಂದ ಬೇಟೆಯನಾಡಿದ್ದೇನೆ. ಚೆನ್ನಮಲ್ಲಿಕಾ ರ್ಜುನನೆ ನನ್ನ ಬೇಟೆಯನ್ನು ಹುಡುಕಿಕೊಡು . ಪರಮಾತ್ಮನನ್ನು ಹುಡುಕಿಕೊಡು ಎಂದು ಕರೆಯುತ್ತಿದ್ದಾರೆ. ಅಕ್ಕಮಹಾದೇವಿಯವರುದೇಹವನ್ನೊಬೇಟೆಯಾಡುವ ಸ್ಥಳವಾಗಿಸಿಕೊಂಡಿದ್ದಾರೆ. ಬೇಟೆಯ ಪ್ರಾಣಿಗಳು ಐದು ಪಂಚೇಂದ್ರಿಯಗಳು. ನಾಲ್ಕು ಅಂತಃಕರಣಗಳು,ಅಷ್ಟ ಮದಗಳು, ಸಪ್ತವ್ಯಸನಗಳು.ಈ ಕಾಯಕಾಡಿನಲ್ಲಿ ಬೇಟೆಯಾಡಿದ್ದೇನೆ.

3) ಊಡಿದಡುಣ್ಣದು, ನೀಡಿದಡೊಲಿಯದು.
ಕಾಡದು, ಬೇಡದು. ಒಲಿಯದು ನೋಡಾ.
ಊಡಿದಡೆ ಉಂಡು ನೀಡಿದಡೆ ಒಲಿದು
ಬೇಡಿದ ವರವ ಕೊಡುವ ಜಂಗಮಲಿಂಗದ ಪಾದವ ಹಿಡಿದು
ಬದುಕಿವೆ ಚೆನ್ನಮಲ್ಲಿಕಾರ್ಜುನ.

ಪದಗಳ ಅರ್ಥ

ಊಡು-ನೀಡು, ನೈವೇದ್ಯಕೊಡು,
ಉಣ್ಣದು-ಸ್ವೀಕರಿಸದು.
ಕಾಡದು-ಅಪೇಕ್ಷಿಸದು

ವಚನದ ಅರ್ಥ

ಊಡಿದಡುಣ್ಣದು. ನೀಡಿದಡೊಲಿಯದು ಕಾಡದು ಬೇಡದು ಒಲಿಯದು ನೋಡಾ. ನೀಡಿದರೆ ಊಟಮಾಡುವುದಿಲ್ಲ. ಕೊಟ್ಟರೆ ಒಲಿಯುವುದಿಲ್ಲ. ನೀಡ ದಿದ್ದರೆ ಕೊಡು ನೀಡು ಎಂದು ಕಾಡುವುದಿಲ್ಲ ಬೇಡುವುದಿಲ್ಲ. ಊಡಿದರೆ ಉಂಡು ನೀಡಿದರೆ ಒಲಿದು ಬೇಡಿದ ವರವ ಕೊಡುವ ಜಂಗಮ ಲಿಂಗದ ಪಾದವ ಹಿಡಿದು ಬದುಕಿದೆ. ಉಣಿಸಿದಾಗ ಸ್ವೀಕರಿಸಿ ನೀಡಿದಾಗ ಒಲಿದು ಅನುಗ್ರಹಿಸುವ ಕೇಳಿದ ವರ ಕೊಡುವ ಜಂಗಮವೆ ಲಿಂಗವಾದ ಗುರುವಿನ ಪಾದವನ್ನು ಪೂಜಿಸಿ ಬದುಕಿದೆನು. ಅವಸ್ಥಾಂತರದ ವಚನ ಇದು ಸಾಧನೆಯಿಂದ ಅನುಭವಕ್ಕೆ ಬಂದದ್ದು. ಇಷ್ಟ ಲಿಂಗವು ಭಕ್ತಿ ಕಲಿಸುವುದಕ್ಕಾಗಿ, ಭಕ್ತನ ಭಾವನೆಗಳಿಗೆ ಒಂದು ಹೊರದಾರಿ. ಸಮುದಾಯವನ್ನು ಒಂದೆಡೆ ತರಲು ಇದು ಸಾಧನ. ಇಷ್ಟಲಿಂಗದ ವಿಚಾರ ದೀಕ್ಷಾಕಾಲಕ್ಕೆ ತಿಳಿಸಿಕೊಡುವುದು ಅಗತ್ಯವಿದೆ. ಇಷ್ಟಲಿಂಗಭಕ್ತಿಯಿಂದ ಜಂಗಮಭಕ್ತಿಯ ಕಡೆಗೆ ಹೊರಳಿದ್ದಾರೆ. ಊಡಿದಡುಣ್ಣದು. ನೀಡಿದಡರಿಯದು. ಇಷ್ಟಲಿಂಗಕ್ಕೆ ನೈವೇದ್ಯ ನೀಡಿದಾಗ ಅದು ಸ್ವೀಕರಿಸುವುದಿಲ್ಲ. ಅದು ಒಂದು ಚುಳುಕು ಅಷ್ಟೆ . ನನಗೆ ಹಸಿ ವಾಗಿದೆ ಎಂದು ಕಾಡುವುದೂ ಇಲ್ಲ. ಬೇಡುವುದೂ ಇಲ್ಲ.ಇದು ವಸ್ತು ಸತ್ಯ. ಆದುದರಿಂದ ಅದು ಒಲಿಯುವುದೂ ಇಲ್ಲ. ಅಲ್ಲಿ ಸ್ವೀಕಾರವೂ ಇಲ್ಲ ನಿರಾಕರಣೆಯೂ ಇಲ್ಲ. ಊಡಿದಡುಂಡು ನೀಡಿದಡೊಲಿದು ಬೇಡಿದ ವರವ ಕೊಡುವ ಜಂಗಮ ಲಿಂಗದ ಪಾದವ ಹಿಡಿದು ಬದುಕಿದೆ.ಎಲ್ಲಿ ಭಕ್ತಿ ಸ್ವೀಕಾರವಿದೆ ಅಲ್ಲಿ ಭಕ್ತಿ ಮಾಡುತೇನೆ .ಜಂಗಮವು ಭಕ್ತಿ ಸ್ವೀಕರಿಸುತ್ತದೆ ಅನುಗ್ರಹಿಸುತ್ತದೆ. ಜಂಗಮವೆ ಪರಮಾತ್ಮ. ಜಂಗಮ ಎಂದರೆ ಸತ್ಯದ ಸಾಕ್ಷಾತ್ಕಾರಮಾಡಿಕೊಂಡವನು.ಅದು ಸಾಧನೆಯಿಂದ ಸಾಧ್ಯ ಮಾಡಿಕೊಂಡ ಸತ್ಯದ ಬೆಳಕು. ಆ ಬೆಳಕೆ ಗುರು, ಜಂಗಮ.

4) ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯ.
ಶಮ ದಮೆ ಶಾಂತಿ ಸೈರಣೆಯಿರಲು ಸಮಾಧಿಯ ಹಂಗೇಕಯ್ಯ?
ಲೋಕವೆ ತಾನಾದ ಬಳಿಕ ಏಕಾಂತದ ಹಂಗೇಕಯ್ಯ
ಚೆನ್ನಮಲ್ಲಿಕಾರ್ಜುನ.

ಪದಗಳ ಅರ್ಥ

ಉಸಿರು-ಪ್ರಾಣ,ಜೀವ, ಇಲ್ಲಿ ಪರಮಾತ್ಮನ ಮಂತ್ರಸ್ಮರಣೆ.
ಪರಿಮಳ-ಸುಗಂಧ,ಅಮೃತ
ಕುಸುಮ-ಹೂವು
ಶಮೆ-ಅಂತರಿಂದ್ರಿಯನಿಗ್ರಹ,
ದಮೆ-ಬಹಿರಿಂದ್ರಿಯ ನಿಗ್ರಹ,
ಶಾಂತಿ-ಶಮೆದಮನಿಗ್ರಹದಿಂದ ಅಂತರಂಗದಲ್ಲಿ ಅವರಿಸುವ ನಿರ್ಮಲ ಭಾವ,
ಸ್ವೈರಣೆ-ಸಂಯಮ,
ಸಮಾಧಿ-ಎಚ್ಚರ, ನಿದ್ರೆ, ಕನಸುಗಳನ್ನು ದಾಟಿದ ಸ್ಥಿತಿ.
ಲೋಕವೆ ತಾನು -ಪರಮಾತ್ಮನೆ ತಾನಾಗುವುದು. ಹಂಗು-ದಾಕ್ಷಿಣ್ಯ.

ವಚನದ ಅರ್ಥ

ಉಸುರಿನ ಪರಿಮಳ ವಿರಲು ಕುಸುಮದ ಹಂಗೇಕಯ್ಯ? ಉಸಿರಾಟವೆ ಪರಿಮಳವಾಗಿರುವಾಗ ಮತ್ತೆ ಬೇರೆ ಹೂವಿನ ಪರಿಮಳದ ಅಗತ್ಯವಾದರೂ ಎಲ್ಲಿದೆ? ಕಮೆ ದಮೆ ಶಾಂತಿ ಸ್ವೈರಣೆಯಿರಲು ಸಮಾಧಿಯ ಹಂಗೇಕಯ್ಯ? ಸಮಾಧಿಯಿಂದ ಏನು ಪಡೆಯಬೇಕೆಂದಿದ್ದೇವೆ ಅದು ಶಮೆ ದಮೆ ಶಾಂತಿ ಸ್ವೈರಣೆಯಿಂದಲೆ ದೊರೆ ಯುತ್ತಿರುವಾಗ ಮತ್ತೆ ಬೇರೆ ಸಮಾಧಿಯ ಅಗತ್ಯವಾದರೂ ಎಲ್ಲಿದೆ? ಲೋಕವೆ ತಾನಾದ ಬಳಿಕ ಏಕಾಂತದ ಹಂಗೇಕಯ್ಯ? ಲೋಕವೆಲ್ಲವೂ ಪರಮಾತ್ಮನೆ ಆಗಿರುವಾಗ ಮತ್ತೆ ಬೇರೆ ಏಕಾಂತದ ಅಗತ್ಯವಾದರೂ ಎಲ್ಲಿದೆ ಇದು ಸಾಧಕರಿಗೆ, ಅನು ಭಾವಿಗಳಿಗೆ, ಮಹಾತ್ಮರಿಗೆ ಮಾರ್ಗದರ್ಶನ ಮಾಡುವ ಶ್ರೇಷ್ಠ ವಚನ. ಅನು ಭಾವ ಜೀವನ ಹೇಗೆ ನಡೆಸಬೇಕೆಂಬ ದಿಕ್ಸೂಚಿ ಈವಚನದಲ್ಲಿದೆ. ಕೇವಲ ಕರ್ಮಾಚರಣೆಯ ವ್ರತದಲ್ಲಿ ನಿರತವಾಗುವುದರಿಂದ ಆತ್ಮನಿಗೆ ತೃಪ್ತಿ ಸಿಗುವುದಿಲ್ಲ. ಪತ್ರೆ, ಪುಷ್ಪಗಳನ್ನು ಬಿಡಿಸಿ ತಂದು ಆ ಪೂಜಾಕ್ರಿಯೆಗಳಲ್ಲಿ ನಿರತವಾಗುವುದು ಕೇವಲ ಒಂದು ಅಭ್ಯಾಸವೇ ಸರಿ. ಅದು ದರ್ಶನದ ಎತ್ತರಕ್ಕೆ ಕರೆದುಕೊಂಡು ಹೋಗಲಾರದು. ಈಪೂಜೆ, ಕ್ರಿಯಾದಿಗಳು ಸಾಮಾನ್ಯರಿಗೆ ತೃಪ್ತಿಕೊಡುತ್ತವೆ. ಆದರೆ ಅದು ಅನುಭಾವಿಗಳಿಗೆ ಸಾಲದು. ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯ? ಅಂತರಂಗದಲ್ಲಿ ಪರಮಾತ್ಮನ ಮಂತ್ರವೇ ಉಸಿರಾಗಿರುವಾಗ ಮತ್ತೆ ಪತ್ರೆ, ಪುಷ್ಪ ಗಳ ಹಂಗೇಕೆ? ಉಸಿರೇ ಪರಿಮಳವಾಗಿದೆ. ಸದ್ ಭಕ್ತಿಯೆ ಅಂತರಂಗವನ್ನು ಅವರಿಸಿದೆ. ಪೂಜೆಯ ಹೂವುಗಳು

ಒಣಗಬಹುದು. ಆದರೆ ಅಂತರಂಗದ ಭಕ್ತಿಯ ಪರಿಮಳ ವಿಕಸಿತವಾಗುತ್ತಲೆ ಇರುತ್ತದೆ. ಶಮೆ ದಮೆ ಶಾಂತಿ ಸೈರಣೆಯಿರಲು ಸಮಾಧಿಯ ಹಂಗೇಕಯ್ಯ?ಸಾಧನೆಯ ಪರಿಣಾಮವಾಗಿ ಅಂತರಂಗ ವಿಕಾಸವಾಗುವುದರಿಂದ ಪಂಚೇಂದ್ರಿಯಗಳು, ಅಂತಃಕರಣಗಳು ವಿಕಾಸವಾಗುತ್ತವೆ. ಅವು ಉದಾತೀಕರಣವಾಗುವುದರಿಂದ ಅಂತರಂಗದಲ್ಲಿ, ವ್ಯಕ್ತಿತ್ವದಲ್ಲಿ ಶಾಂತಿ, ಸಮಾಧಾನಗಳು ಉಂಟಾಗುತ್ತವೆ. ಅಂತರಂಗ ವಿಕಾಸವಾದ ಮೇಲೆ ಮತ್ತೆ ಸಮಾಧಿಯ ಅಗ ತ್ಯವಿಲ್ಲ. ವ್ಯಕ್ತಿ ಸಮಾಧಿಸ್ಥಿತಿಗೆ ಹೋಗುವುದಾದರೂ ಯಾಕೆ? ತಾನು ಪರಿಪೂರ್ಣನಾಗಲು. ಪರಿಪೂರ್ಣನಾಗುವುದು ಎಂದರೇನು? ವ್ಯಕ್ತಿಯು ತನ್ನ ಎಲ್ಲ ದೋಷಗಳನ್ನು ಕಳೆದುಕೊಳ್ಳುವುದು. ಅಂದರೆ ತಪ್ಪು ಮಾಡಲು ಹೊರಡುವ ಇಂದ್ರಿಯಗಳನ್ನು ಹತೋಟಿಯಲ್ಲಿರಿಸಿಕೊಳ್ಳುವುದೇ ಆಗಿದೆ. ಯಾವಾಗ ಇಂದ್ರಿ ಯಗಳು ಶಾಂತವಾಗುತ್ತವೆ. ಆಗ ದುಃಖಇಲ್ಲ. ದುಃಖ ಇಲ್ಲದ ಸ್ಥಿತಿಯೆ ಆನಂದ. ನಿರ್ಮಲತ್ವವೆ ಜೀವನವಾಗುವುದು. ಅದೇ ಜೀವನ ಆದ ಮೇಲೆ ಸಮಾಧಿಯಸ್ಥಿತಿ ನಿತ್ಯದಲ್ಲಿ ತುಂಬಿರುತ್ತದೆ ಲೋಕವೆ ತಾನಾದ ಬಳಿಕ ಏಕಾಂತದ ಹಂಗೇಕಯ್ಯ? ಲೋಕವೆ ತಾನಾದ ಸ್ಥಿತಿ ಅಕ್ಕಮಹಾದೇವಿಯವರದು. ಲೋಕವನ್ನೆಲ್ಲ ತನ್ನಂತೆ ಕಾಣುವುದು. ನಾನು ಬೇರೆ ಇನ್ನೊಂದು ಬೇರೆ ಎನ್ನುವ ಭೇದಪ್ರಜ್ಞೆ ಯಾವಾಗ ಹೋಯಿತು. ಉಳಿದುದು ಕೇವಲ ಪರಮಾತ್ಮ.

5)ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನನೆಯಿರೆ ಶಿವನ ನೆನೆಯಿರೇ ಈಜನ್ಮ ಬಳಿಕಿಲ್ಲ.
ಚೆನ್ನಮಲ್ಲಿಕಾರ್ಜುನ ದೇವರದೇವನ ನೆನೆದು
ಪಂಚಮಹಾಪಾತಕರೆಲ್ಲರು ಮುಕ್ತಿವಡೆದರು.

ಪದಗಳ ಅರ್ಥ

. ಉದಯ-ಹಗಲು, ಅಸ್ತಮಾನ-ರಾತ್ರಿ.
ಕೊಳಗ-ಮಾಪನ, 12ಸೇರಿನ ಅಳತೆ. ಮುಕ್ತಿ-ಮೋಕ್ಷ
ಪಂಚಮಹಾಪಾತಕ-ಗುರು,ಶಿಶು,ಸ್ತ್ರಿ,ಗೋಹತ್ಯೆ, ಪಾರದ್ವಾರ.

ವಚನದ ಅರ್ಥ

ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ ಶಿವನ ನೆನೆಯಿರೇ .ಶಿವನ ನೆನೆಯಿರೆ ಹಗಲು, ರಾತ್ರಿಗಳೆಂಬ ಕೊಳಗವು ನಮ್ಮ ಆಯುಷ್ಯವೆನ್ನುವ ರಾಶಿಯನ್ನು ಅಳೆಯುವ ಮುಂಚೆಯೆ ಶಿವನನ್ನು ನೆನೆಯಿರಿ. ಈಜನ್ಮ ಬಳಿಕಿಲ್ಲ. ಚೆನ್ನಮಲ್ಲಿಕಾರ್ಜುನ ದೇವರ ದೇವನ ನೆನೆದು ಪಂಚ ಮಹಾಪಾತಕರೆಲ್ಲ ಮುಕ್ತಿವಡೆದರು. ಈ ಮನುಷ್ಯ ಜನ್ಮವು ಮತ್ತೆ ಬರದು. ಈಗ ಸಿಕ್ಕಿರುವುದು ಅಪೂರ್ವ. ಐದು ಮಹಾಪಾತಕಮಾಡಿದವರು ಕೂಡ ಪರಮಾತ್ಮ ನನ್ನು ನೆನೆದು ಮುಕ್ತಿ ಪಡೆದುಕೊಂಡರು. ಪರಮಾತ್ಮ ಎಂತಹವರ ತಪ್ಪನ್ನೂ ಮನ್ನಿಸಿ ಕ್ಷಮಿಸುತ್ತಾನೆ. ಪ್ರಭುದೇವರು,ಮಹಾವೀರ, ಬುದ್ಧರಂತೆ ಅಕ್ಕಮಹಾದೇವಿಯ ವರೂ ಧರ್ಮಪ್ರಸಾರದ ಮಣಿಹದಲ್ಲಿದ್ದರು.ಕಾಲದ ವಿಚಾರದಲ್ಲಿ ಮನುಷ್ಯರು ತಮ್ಮ ಜೀವನವನ್ನು ಹೇಗೆ ಎಚ್ಚರಿಕೆಯಿಂದ ಕಳೆಯಬೇಕೆಂಬ ಪರಿಜ್ಞಾನ ನೀಡುತ್ತಿದ್ದಾರೆ. ಹಗಲು ರಾತ್ರಿಗಳನ್ನು ಕೊಳಗದ ಅಳತೆಗೆ ಹೋಲಿಸಿದ್ದಾರೆ. ಈ ಜನ್ಮವು ಅಪೂರ್ವವಾದುದು . ನಮ್ಮ ಆಯುಷ್ಯವನ್ನು ಹಗಲು ರಾತ್ರಿಗಳು ನಿತ್ಯ ಅಳೆಯ ತೊಡಗಿವೆ.ನಾವುಎಚ್ಚರ ತಪ್ಪಿದರೆ ಆಯುಷ್ಯವನ್ನು ಕಳೆದುಕೊಂಡು ನಾವು ಯಾವ ಜನ್ಮಕ್ಕೆ ಹೋಗಿಬಿಡುತ್ತೇವೆಯೋ ಏನೊ? ನಮ್ಮ ಆಯುಷ್ಯ, ಜನ್ಮ ನಷ್ಟವಾಗುವ ಮುನ್ನ ನಾವು ಶಿವನನ್ನು ನೆನೆಯೋಣ. ಮನುಷ್ಯ ಜನ್ಮ ಬರುವುದೊ ಬಿಡುವುದೊ ಯಾರಿಗೆ ಗೊತ್ತು? ಈಗ ಭಕ್ತಿನಡೆಸಿ ಮುಕ್ತಿ ಪಡೆದುಕೊಳ್ಳೋಣ.

6) ಉಣಲೆಂದು ಬಂದ ಸುಖ ಉಂಡಲ್ಲದೆ ಹರಿಯದು.
ಕಾಣಲೆಂದು ಬಂದ ದುಃಖ ಕಂಡಲ್ಲದೆ ಹರಿಯದು.
ತನುವಿಂಗೆ ಬಂದ ಕರ್ಮ ಹರಿವ ಕಾಲಕ್ಕೆ
ಚೆನ್ನಮಲ್ಲಿಕಾರ್ಜುನ ದೇವರು ಕಡೆಗಣ್ಣಿನಿಂದ ನೋಡಿದರು.

ಪದಗಳ ಅರ್ಥ

ಸುಖ-ಸಂತೋಷ, ಪುಣ್ಯ.
ದುಃಖ-ಪಾಪ, ಕಷ್ಟ

ಕರ್ಮ-ವಿಧಿ, ಮೂರುಕರ್ಮ ಗಳು.
ಕಡೆಗಣ್ಣು-ಅಭಯಹಸ್ತದ ನೋಟ.
ನಾನಿದ್ದೇನೆ ಎಂಬ ಆಸರೆ.

ವಚನದ ಅರ್ಥ

ಉಣಲೆಂದು ಬಂದ ಸುಖ ಉಂಡಲ್ಲದೆ ಹರಿಯದು. ಕಾಣಲೆಂದು ಬಂದ ದುಃಖ ಕಂಡಲ್ಲದೆ ಹರಿಯದು.ನಾವು ಉಣಲೇಬೇಕಾದ ಸುಖ ನಾವು ಊಟಮಾಡದೆ ಮುಗಿ  ಯುವುದಿಲ್ಲ. ನಾವು ಅನುಭವಿಸಲೇಬೇಕಾದ ಕಷ್ಟಗಳು ನಾವು ಅನುಭವಿಸಿದಲ್ಲದೆ ತೀರುವುದಿಲ್ಲ.
ತನುವಿಂಗೆ ಬಂದ ಕರ್ಮ ಹರಿವ ಕಾಲಕ್ಕೆ ಚೆನ್ನಮಲ್ಲಿಕಾರ್ಜುನ ದೇವರು ಕಡೆಗಣ್ಣಿನಿಂದ ನೋಡಿದರು. ಈ ದೇಹಕ್ಕೆ ಬಂದ ಕರ್ಮಗಳು ಮುಗಿವ ಕಾಲಕ್ಕೆ - ಚೆನ್ನಮಲ್ಲಿಕಾರ್ಜುನದೇವರು ನಾನು ಇದ್ದೇನೆ ಎಂಬಂತೆ ನೋಡುತ್ತಾನೆ.
ಆಯಾಸಗೊಂಡ ನೆರವಿಗೆ ದಾರಿನೋಡುವ ಸ್ಥಿತಿ ಇದೆ.
ಈವಚನದಲ್ಲಿ ಕರ್ಮವನ್ನು ಚೆನ್ನಮಲ್ಲಿಕಾರ್ಜುನನ ಅನುಗ್ರಹವಿದ್ದರೆ ಮಾತ್ರ ಗೆಲ್ಲಲು ಸಾಧ್ಯ ಎಂಬ ವಿಚಾರವಿದೆ.

ಈ ವಚನದಲ್ಲಿ ನಿರ್ಲಿಪ್ತ ಸ್ಥಿತಿ ಮತ್ತು ಎಲ್ಲವೂ ಅವನಿಚ್ಛೆ ಯಿದ್ದಂತೆ ನಡೆಯುತ್ತದೆ ಎನ್ನು ಭಾವವಿದೆ.

ನಾವು ಏನೆ ಪ್ರಯತ್ನ ಮಾಡಿದರೂ ಆಗುವುದು ಆಗೇ ತೀರುತ್ತದೆ ತಪ್ಪಿಸಲು ಸಾಧ್ಯವಿಲ್ಲ. ಊಟಮಾಡಬೇಕಾದುದನ್ನು ನಾವು ಊಟ ಮಾಡಲೇ ಬೇಕು. ಹಾಗೆ ಅನುಭವಿಸಬೇಕಾದ ದುಃಖವನ್ನು ಅನುಭವಿಸಿಯೇ ತೀರಬೇಕು. ಆ ದುಃಖ ನಾವು ಉಂಡಲ್ಲದೆ ಮುಗಿಯುವುದಿಲ್ಲ. ಕರ್ಮಗಳು ಈದೇಹವಿಡಿದು ಬಂದಿವೆ. ಅದು ಹೋಗುವ ಕಾಲಕ್ಕೆ ಚೆನ್ನಮಲ್ಲಿಕಾರ್ಜುನ ದೇವರು ಇನ್ನು ಸಾಕು ಹೋಗು ಎನ್ನುವಂತೆ ಕಡೆಗಣ್ಣಿನಿಂದ ನೋಡಿದರು.
ಕರ್ಮಮುಗಿಯಿತು ಆಗ ಪರಮಾತ್ಮ ನಮ್ಮತ್ತ ನೋಡುತ್ತಾನೆ.
ಆತನ ಅನುಗ್ರಹ ಬರಬೇಕಾದರೂ ಕರ್ಮಗಳೆಲ್ಲ ಮುಗಿ ದಿರಬೇಕು.
ಕೆಳಕ್ಕೆ ಬಿದ್ದರೆ ನಾವೆ ಏಳಬೇಕು.

7) ಉಡುವೆ ನಾನು ಲಿಂಗಕ್ಕೆಂದು ತೊಡುವೆ ನಾನು ಲಿಂಗಕ್ಕೆಂದು ಮಾಡುವೆ ನಾನು ಲಿಂಗಕ್ಕೆಂದು ನೋಡುವೆ ನಾನು ಲಿಂಗಕ್ಕೆಂದು ಎನ್ನಂತರಂಗಗಳು ಬಹಿರಂಗಗಳು ಲಿಂಗಕ್ಕಾಗಿ ಮಾಡಿಯೂ ಮಾಡದಂತಿಪ್ಪೆ, ಚೆನ್ನಮಲ್ಲಿಕಾರ್ಜುನನೊಳಗಾಗಿ ಹತ್ತರೊಳಗೆ ಹನ್ನೊಂದಾಗಿಪ್ಪೆನವ್ವ.

ವಚನದ ಅರ್ಥ

ಉಡುವೆನಾನು ಲಿಂಗಕ್ಕೆಂದು ತೊಡುವೆ ನಾನು ಲಿಂಗಕ್ಕೆಂದು ಮಾಡುವೆ ನಾನು
ಲಿಂಗಕ್ಕೆಂದು ನೋಡುವೆ ನಾನು ಲಿಂಗಕ್ಕೆಂದು ಉಡುವ ತೊಡುವ ಮಾಡುವ 'ನೋಡುವ ಎಲ್ಲ ಕ್ರಿಯೆಗಳನ್ನು ಲಿಂಗಕ್ಕೆಂದೆ ಮಾಡುವ ಸದಾಚಾರವನ್ನು ಅಕ್ಕನವರು ಮೈಗೂಡಿಸಿಕೊಂಡಿದ್ದಾರೆ.
ಎನ್ನಂತರಂಗಗಳು ಬಹಿರಂಗಗಳು ಲಿಂಗಕ್ಕಾಗಿ ಮಾಡಿಯೂ ಮಾಡದಂತಿಪ್ಪೆ. ನನ್ನ ಅಂತರಂಗ ಬಹಿರಂಗದಲ್ಲಿ ಪರಮಾತ್ಮನ ಧ್ಯಾನ ತುಂಬಿದೆ.ಯಾವುದೆ ಕ್ರಿಯೆಗಳನ್ನು ಮಾಡಿದರೂ ಅವುಗಳನ್ನು ಪರಮಾತ್ಮನಿಗೆಂದೆ ಮಾಡುತ್ತಾರೆ.
ಚೆನ್ನಲ್ಲಿಕಾರ್ಜುನನೊಳಗಾಗಿ ಹತ್ತರೊಳಗೆ ಹನ್ನೊಂದಾಗಿಪ್ಪೆನಯ್ಯ. ಚೆನ್ನಮಲ್ಲಿಕಾರ್ಜುನನಿಗಾಗಿ ಬದುಕಿರುವ ಈ ಜೀವ ಹತ್ತರಲ್ಲಿ ಹನ್ನೊಂದನೆಯವಳಾಗಿ ಸಹಜವಾಗಿರುವೆನು. ಇದು ನಾನು ಎನ್ನುವ ಭಾವಹೋದ ಘಟ್ಟ ತಪಸ್ಸಿನಲ್ಲಿ ಹಲವು ಕಾಲ ಕಳವಳಿಸಿ ಮನಸ್ಸು ಏರಿದ ಎತ್ತರ ಇದು. ಜೀವನದ ಕಟುಸತ್ಯದ ದರ್ಶನದಿಂದ ನನ್ನಮಿತಿ ಏನು? ಎನ್ನುವುದರ ಸತ್ಯವೂ ಆಯಿತು ದೇಹವಿಡಿದು ಬದು ಕುವುದು ಅನಿವಾರ್ಯ.
ಈಲೋಕದ ಹಂಬಲಗಳನ್ನು ಬಿಟ್ಟು ತಪಸ್ಸಿಗೆ ಬಂದರು.ಅನುಭಾವಜೀವನ ಸಡೆಸಬೇಕಾದರೂ ದೇಹ, ಇಂದ್ರಿಯಗಳು ಬೇಕು. ನನಗಾಗಿ ದೇಹ ಪೋಷಣೆ ಮಾಡದಿದ್ದರೂ ಅನುಭಾವ ಜೀವನಕ್ಕಾಗಿಯಾದರೂ ದೇಹ ಪೋಷಿಸಲೇಬೇಕು.
ಉಡುವೆ ನಾನು ಲಿಂಗಕ್ಕೆಂದು ತೊಡುವೆ ನಾನು ಲಿಂಗಕ್ಕೆಂದು.ದೇವರ ಬಗೆಗೆ ಖಚಿತ ಸತ್ಯವು ಮೂಡಿದ ಮೇಲೆ ರುದ್ರಾಕ್ಷಧಾರಣೆಯ ಹಾಗೆ ಚಳಿ, ಮಳೆ, ಬಿಸಿಲು, ಗಾಳಿ ಕಾರಣವಾಗಿ ಕೂದಲುಡುಗೆಯಾದರೂ ಅಗತ್ಯವೆಂದು ಅನಿಸಿರಬೇಕು.ಕಾವಿಯ ವಲ್ಕಲ,ಬಿಳಿಯ ಉಡುಗೆಗಳು ಇದ್ದಿರಲೂ ಬಹುದು. ನನಗಾಗಿ ಬದುಕುವುದು ಹೋಯಿತು. ಇನ್ನು ಬದುಕುವುದೇನಿದ್ದರೂ ನಿನಗಾಗಿ. ನನ್ನ ಅಂತರಂಗ ಬಹಿರಂಗವೆಲ್ಲ ನಿನಗಾಗಿ ನಾನಿನ್ನು

ನನ್ನ ದೇವನೊಳಗಾಗಿ ಹತ್ತರಲ್ಲಿ ಹನ್ನೊಂದಾಗಿ ಬಾಳುತ್ತೇನೆ. ಅರಮನೆ,ರಾಣಿ ಪದವಿಯನ್ನೆ ಬಿಟ್ಟು ಬಂದೆ ಎನ್ನುವ ನೀನು ಈರುದ್ರಾಕ್ಷಿ,ಜಪಮಣಿ,ಕಾವಿವಲ್ಕಲ, ಕೂದಲ ವಸ್ತ್ರಗಳ ನ್ನಾದರೂ ಯಾರಿಗಾಗಿ ಉಡುವೆ? ಯಾರಿಗಾಗಿಯಾದರೂ ಬದುಕುವೆ ?ಇತರ ಪ್ರಶ್ನೆಗಳನ್ನು ಕೇಳಿದವರಿಗೆ ಅವರು ಹೀಗೆ ಉತ್ತರಿಸಿದ್ದಾರೆ.ಅಕ್ಕನವರು ಅವರ ಪ್ರತಿಭೆ,ತಪಸ್ಸು ವಚನಗಳು,ಜ್ಞಾನೋಪದೇಶ ವೈರಾಗ್ಯ ಕಾರಣವಾಗಿ ಲೋಕೋತ್ತರ ವಾದ ಪ್ರಸಿದ್ಧಿಪಡೆದರು. ಆದರೂ ನಾನು ಹತ್ತರಲ್ಲಿ ಹನ್ನೊಂದಾಗಿ ಇರುವೆನೆಂದು ಹೇಳಿದ್ದಾರೆ. ಪ್ರಸಿದ್ಧಿ ಕೀರ್ತಿಗಳು ಯಾರಿಗೆ ಬೇಕು.ಅಕ್ಕನವರಿಗೆ ಪರಮಾತ್ಮ ಬೇಕು!